**ಸಿವಿಲ್ ನ್ಯಾಯಾಧೀಶರ ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ ಔರಾದ(ಬಿ)**
**ಸಿ.ಸಿ. ನಂ. 334/2017**

**ಚಾಸಾ–7 ಪ್ರಾಸಾ–7**

ದಿನಾಂಕ 18–12–2024 ರಂದು ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

| | |
|---|---|
| ಹೆಸರು | ಃ ಧನಾಜಿ |
| ತಂದೆಯ ಹೆಸರು | ಃ ರಾಜೇಂದ್ರ |
| ವಯಸ್ಸು | ಃ 50 ವರ್ಷ |
| ಉದ್ಯೋಗ | ಃ ಕೂಲಿಕೆಲಸ |
| ವಾಸ ಸ್ಥಳ | ಃ ದಾಬಕಾ–ಸಿ |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ–**

1. ಚಾಸಾ–1, 4, 5, 6, 8 ರಿಂದ 18 ರವರ ಪರಿಚಯ ಇರುತ್ತದೆ. 1 ರಿಂದ 4 ನೇ ಆರೋಪಿತರು ನನಗೆ ಗೊತ್ತು. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಪೋಲಿಸರು ನನ್ನನು ವಿಚಾರಣೆ ಮಾಡಿಲ್ಲ ಮತ್ತು ಯಾವುದೇ ಹೇಳಿಕೆ ಪಡೆದುಕೊಂಡಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಗೆ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಬೇಕು ಎಂದು ಕೇಳಿಕೊಂಡಿದ್ದರಿಂದ ಅನುಮತಿಸಲಾಗಿದೆ.)

**ಪಾಟೀ ಸವಾಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ–**

1. ನಾನು ದಾಬಕಾ–ಸಿ ಗ್ರಾಮ ಪಂಚಾಯತಿಯಲ್ಲಿ ಉದ್ಯೋಗ ಖಾತ್ರಿ ಯೋಜನಯಲ್ಲಿ ಕೂಲಿ ಕೆಲಸ ಮಾಡುತ್ತೇನೆ ಎಂದರೆ ಸರಿ. ನನಗೆ ದಾಬಾಕಾ–ಸಿ ಗ್ರಾಮ ಪಂಚಾಯತಿನ ಪಿ.ಡಿ.ಓಯಾದ 2 ನೇ ಆರೋಪಿತನು ತೆರೆದ ಬಾವಿ ಕೆಲಸ ಮಾಡಲು ಕೂಲಿ ನೀಡಿದ್ದು ಇರುತ್ತದೆ ಎಂದರೆ ಸರಿ. ನಾನು ಮತ್ತು ಚಾಸಾ–6, 8 ರಿಂದ 14 ರವರು ಕೂಡಿ ಚಾಸಾ–5 ರವರ ಹೊಲದ ಹತ್ತಿರ ಇರುವ ನಾಲಾದಲ್ಲಿ ಬಾವಿ ಕೆಲಸ ಮಾಡಲು ಹೋಗಿದ್ದೇವು ಎಂದರೆ ಸರಿ. ನಾವು ಚಾಸಾ–5 ರವರ ಜಮೀನು ಸರ್ವೆ ನಂ. 14 ಕ್ಕೆ ಹತ್ತಿ ಇರುವ ನಾಲಾದಲ್ಲಿ ಕೂಲಿ ಕೆಲಸ

ಮಾಡಿದ್ದೇವು ಎಂದರೆ ಸರಿ. ಸದರಿ ಕೆಲಸ ಮಾಡಿದಕ್ಕಾಗಿ ನನ್ನ ಬ್ಯಾಂಕ ಖಾತೆಗೆ ರೂಪಾಯಿ 1750/–ಜಮಾ ಮಾಡಲಾಗಿತ್ತು ಎಂದರೆ ಸರಿ. ಚಾಸಾ–5 ರವರ ಜಮೀನು ಸರ್ವೆ ನಂಬರ 14 ರಲ್ಲಿ ಬಾವಿ ಇಲ್ಲ ಎಂದರೆ ಸಾಕ್ಷಿಯು ಸದರಿ ಜಮೀನಿಗೆ ಹತ್ತಿ ನಾಲಾ ಇದ್ದು ಅದರಲ್ಲಿ ಬಾವಿ ಇರುತ್ತದೆ ಎಂದರೆ ಸರಿ. 2011–12 ನೇ ಸಾಲಿನಲ್ಲಿ ಎಂ.ಜಿ.ಎಲ್.ಆರ್.ಎನ್.ಜಿ ಯೋಜನೆಯಡಿಯಲ್ಲಿ ದಾಬಾಕಾ–ಸಿ ಗ್ರಾಮ ಪಂಚಾಯತಿಯಲ್ಲಿ ಬರುವ ಚಾಸಾ–5 ರವರ ಜಮೀನು ಸರ್ವೆ ನಂ. 14 ಕ್ಕೆ ಹತ್ತಿ ಇರುವ ನಾಲಾದಲ್ಲಿ ತೆರೆದ ಬಾವಿ ತೆಗೆಸಿದ್ದು, ಅದಕ್ಕೆ ರೂಪಾಯಿ 1 ಲಕ್ಷ 21 ಸಾವಿರದ 910 ಗಳ ಕಾಮಗಾರಿ ಆಗಿತ್ತು ಎಂದರೆ ಸಾಕ್ಷಿಯು ಕಾಮಗಾರಿ ಆಗಿರುತ್ತದೆ ಆದರೆ ಎಷ್ಟು ರೂಪಾಯಿ ಖರ್ಚು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಕಾಮಗಾರಿಗೆ 1 ಲಕ್ಷ 21 ಸಾವಿರ 910 ರೂಪಾಯಿ ಖರ್ಚು ಆದ ಬಗ್ಗೆ ನನಗೆ ಗೊತ್ತಿದ್ದರು ಸಹಿತ ಗೊತ್ತಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಆರೋಪಿತರೆಲ್ಲರು ಸೇರಿ ಸರ್ವೆ ನಂ.14 ರಲ್ಲಿ ಬಾವಿಯನ್ನು ತೆಗೆದೆ ಸದರಿ ಸರ್ವೆ ನಂಬರ ಪಕ್ಕದಲ್ಲಿರುವ ನಾಲಾದಲ್ಲಿ ಬಾವಿಯನ್ನು ತೆಗೆದು ಚಾಸಾ–1 ರವರಿಗೆ ಮತ್ತು ಸರಕಾರಕ್ಕೆ ಮೋಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆರೋಪಿತರು ಚಾಸಾ–1 ರವರಿಗೆ ಮತ್ತು ಸರಕಾರಕ್ಕೆ ಮೊಸ ಮಾಡಿದ್ದುದರು ಸಹಿತ ಮೋಸ ಮಾಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಸಂಬಂಧ ನಾನು ದಿನಾಂಕ:29–11–2016 ರಂದು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. (ಸಾಕ್ಷಿಯು ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ–9 ಎಂದು ಗುರುತಿಸಲಾಯಿತು).

**ಪಾಟೀ ಸವಾಲು: 2 ರಿಂದ 4 ನೇ ಆರೋಪಿತರ ಪರವಾಗಿ ಶ್ರೀ. ಬಿ. ಸಿ. ಕೆ. ವಕೀಲರಿಂದಃ–**

1. ಬಾವಿಯು ನಾಲೆಯಲ್ಲಿ ಇರುವುದಿಲ್ಲ, ಚಾಸಾ–1 ರವರ ಹೊಲದಲ್ಲಿ ಇದೆ ಎಂದರೆ ಸರಿ. ಚಾಸಾ1 ಮತ್ತು 5 ರವರ ಜಮೀನು ಸರ್ವೆ ನಂ.14 ರಲ್ಲಿಯೇ ಬಾವಿ ತೆಗೆಯಲಾಗಿದೆ ಎಂದರೆ ಸರಿ. ಸದರಿ ಬಾವಿಯನ್ನು ನಾಲಾ ಬಾಜು ಸರ್ವೆ ನಂ.14 ರಲ್ಲಿ ತೆಗೆದಿರುತ್ತಾರೆ ಎಂದರೆ ಸರಿ. ಸದರಿ ಬಾವಿಯು ನಾಲೆಯನ್ನು ಬಿಟ್ಟು 75 ರಿಂದ 100 ಮೀಟರ ಅಂತರದಲ್ಲಿರುತ್ತದೆ ಎಂದರೆ ಸರಿ. ಸದರಿ ಬಾವಿಯ ನೀರನ್ನು ಗುರತು ಮಾಡಲು ಬೀದರಿನ ಜಿಯಾಲಾಜಿಸ್ಟ್ ಬಂದು ಗುರುತು ಮಾಡಿರುತ್ತಾರೆ ಎಂದರೆ ಯಾರು ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಎಂ.ಜಿ.ಎಲ್.ಆರ್.ಎನ್.ಜಿ ಯೋಜನೆಯಡಿಯಲ್ಲಿ ಕೂಲಿ ಕೆಲಸ ಮಾಡಿದ ಜನರಿಗೆ ಅವರ ಬ್ಯಾಂಕ ಖಾತೆಗೆ ನೇರವಾಗಿ ಹಣ ಜಮಾ ಆಗುತ್ತದೆ ಎಂದರೆ ಸರಿ.

2. ಸದರಿ ಎಂ.ಜಿ.ಎಲ್.ಆರ್.ಎನ್.ಜಿ ಯೋಜನೆಯಡಿಯಲ್ಲಿ 10 ಬಾವಿಗಳನ್ನು ದಾಬಕಾ–ಸಿ ಗ್ರಾಮ ಪಂಚಾಯತಿಯಡಿಲ್ಲಿ ತೆಗೆಯಲಾಗಿರುತ್ತದೆ ಎಂದರೆ ಸರಿ. ಸದರಿ 10 ಬಾವಿಗಳನ್ನು ತೆಗೆಯಲು ನಾವೇ ಕೆಲಸ ಮಾಡಿರುತ್ತೇವೆ. ಬಾವಿಯನ್ನು ನಾಲಾಯಲ್ಲಿ ತೆಗೆದಿರುವುದಿಲ್ಲ. ನಾಲೆಯಿಂದ 75–100 ಮೀಟರ ಅಂತರದಲ್ಲಿ ಚಾಸಾ–5 ರವರ ಜಮೀನಿನಲ್ಲಿ ತೆಗೆಯಲಾಗಿದೆ ಎಂದರೆ ಸರಿ.

**(1 ನೇ ಆರೋಪಿ ಹಾಗೂ 1 ನೇ ಆರೋಪಿಪರ ಶ್ರಿ. ಆರ್.ಎ.ಎನ್. ವಕೀಲರು**

**ಗೈರು ಹಾಜರು ಇರುವುದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು**).

(ಸಾಕ್ಷಿಯು ಮರಾಠಿಯಲ್ಲಿ ಹೇಳಿದ್ದನ್ನು ಅದನ್ನು ಯಥಾವತ್ತಾಗಿ ಕನ್ನಡದಲ್ಲಿ ಅನುವಾದಿಸಿ ನನ್ನ ಉಕ್ತಲೇಖನದ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಗಣಕೀಕೃತಗೊಳಿಸಲಾಯಿತು)

ಓ. ಹೆ. ಕೆ. ಸರಿ ಇದೆ.

ಪ್ರ.ದ.ನ್ಯಾ.ದಂ.ಗಳು, ಔರಾ ದ್.